**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 3032/2021**
**ಚಾಸಾ - 05 /** ಪ್ರಾಸಾ -04

| | |
|---|---|
| ಹೆಸರು | **ಗಂಗಾಧರಪ್ಪ** |
| ತಂದೆಯ ಹೆಸರು | **ಪುಟ್ಟಯ್ಯ** |
| ವಯಸ್ಸು | **43** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಸೂಂಡೇಕೊಪ್ಪ** |

**ದಿನಾಂಕಃ19-09-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನನಗೆ ಚಾಸಾ- 1 ರಿಂದ 4ರವರ ಬಗ್ಗೆ ಗೊತ್ತು. ಅವರು ನನ್ನ ದೂರದ ಸಂಬಂಧಿಕರು. 2015 ನೇ ಇಸವಿಯ 29ನೇ ತಾರೀಖಿನಂದು ಆರೋಪಿಗಳು ಚಾಸಾ-2ರವರ ಜೊತೆಯಲ್ಲಿ ಗಲಾಟೆಯನ್ನು ಮಾಡಿದ್ದರು. ಅದಕ್ಕೂ ಮೊದಲು ಚಾಸಾ-6ರವರು ಕಾರನ್ನು ನಿಲ್ಲಿಸಿದ್ದರು ಮತ್ತು ಸದರಿ ವಿಷಯಕ್ಕೆ ಜಗಳ ಆಗಿತ್ತು. ಸದರಿ ವಿಷಯವನ್ನು ಚಾಸಾ-1ರವರು ನನಗೆ ತಿಳಿಸಿದರು. ಈಗ ಸಾಕ್ಷಿಗೆ ನಿಪಿ-3ನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-2ನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ದಿ.02-02-2021 ರಂದು ಸಂಜೆ 4 ರಿಂದ ಸುಮಾರು 5 ರಿಂದ 5.30ರವರೆಗೆ ಪೋಲೀಸರು ನನಗೆ ನೋಟಿಸ್ ನ್ನು ನೀಡಿ ಕರೆಸಿ ಮೇಟಿ ಪಾಳ್ಯ ಗ್ರಾಮದ ಸರ್ವೆ ನಂ.18ರಲ್ಲಿ ಸ್ಥಳ ಪರಿಶೀಲನೆಯನ್ನು ಮಾಡಿದರು. ನನ್ನ ಜೊತೆ ನಿಪಿ-2 ಮತ್ತು 3ಕ್ಕೆ ಚಾಸಾ-1 ಮತ್ತು 4ರವರು ಸಹಿಯನ್ನು ಮಾಡಿದರು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಪಾಟೀ **ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ. 27-09-2015 ರಂದು ನಿಮಗೆ ಪರಿಚಯವಿರುವ ಚಾಸಾ-1ರವರು ಫೋನ್ ಮಾಡಿ ದಿ.28-09-2015 ರಂದು ಬೆಳಗ್ಗೆ 10.30ರ ಸಮಯದಲ್ಲಿ 1ನೇ ಆರೋಪಿಯು ನಮ್ಮ ಕಾರನ್ನು ಅವರ ಜಾಗದಲ್ಲಿ ನಿಲ್ಲಿಸಿದ್ದೇನೆ ಎಂಬ ವಿಚಾರದಲ್ಲಿ ಗುಂಪು ಕಟ್ಟಿಕೊಂಡು ಏಕಾ ಏಕಿಯಾಗಿ ಬಂದು ತನಗೆ, ಚಾಸಾ-1, 2, 6 ಮತ್ತು 7ರವರಿಗೆ ಏಕೆ ನಮ್ಮ ಹೊಲದಲ್ಲಿ ಕಾರನ್ನು ನಿಲ್ಲಿಸಿದ್ದೀರಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು, ಜಗಳ ಮಾಡಿದರು ಎಂದು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.28-09-2015 ರಂದು ಸಂಜೆ 7 ಗಂಟೆ ಸಮಯದಲ್ಲಿ ಚಾಸಾ-2 ಮತ್ತು 3ರವರು ಮನೆಯ ಮುಂದೆ ನಿಂತಿದ್ದಾಗ ಆರೋಪಿಗಳು ಅವರ ಮನೆಯ ಬಳಿ ಹೋಗಿದ್ದರು, 2ನೇ ಆರೋಪಿಯು ನಿಮ್ಮ ಮಕ್ಕಳು ಏಕೆ ಕಾರನ್ನು ತಮ್ಮ ಜಾಗದಲ್ಲಿ ನಿಲ್ಲಿಸಿದ್ದು, ನಿಮ್ಮ ಅಪ್ಪನದಾ ಜಾಗ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡೆದು ಇನ್ನೊಂದು ಸಾರಿ ತಮ್ಮ ತಂಟೆಗೆ ಬಂದರೆ ಸಾಯಿಸಿ ಬಿಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಸದರಿ ವಿಷಯದ ಬಗ್ಗೆ ದಿ.29-09-2015 ರಂದು ಚಾಸಾ-1ರವರು ದೂರನ್ನು ನೀಡಲು ಹೋದಾಗ ಅವರ ಜೊತೆ ನೀವು ಮತ್ತು ಚಾಸಾ-2ರವರು ಸಹ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಚಾಸಾ-1ರವರು ಹೊಲದ ದಾಖಲೆಗಳನ್ನು ತೆಗೆದುಕೊಂಡು ಬರಲು ಮನೆಯ ಬಳಿ ಹೋದಾಗ ಆರೋಪಿಗಳು ಪುನಃ ಚಾಸಾ-1ರವರನ್ನು ಅಡ್ಡಗಟ್ಟಿದರು, 1ನೇ ಆರೋಪಿಯು ಚಾಸಾ-1ರವರ ಎಡಗೈಗೆ ಕೈಯಿಂದ ಹೊಡೆದರು ಮತ್ತು ಇಬ್ಬರನ್ನು ಠಾಣೆಗೆ ಕರೆಯಿಸಿ ಇಬ್ಬರಿಗೂ ಬುದ್ದಿವಾದ ಹೇಳಿ ತೀರ್ಮಾನ ಮಾಡಲಾಯಿತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಚಾಸಾ-1ರಿಂದ 3 ಮತ್ತು ಲೀಲಾವತಿಯವರು ವಾಪಸ್ಸು ಮನೆಗೆ ಹೋಗುತ್ತಿರುವಾಗ 1ನೇ ಆರೋಪಿಯು ಮತ್ತೆ ಗಲಾಟೆ ಮಾಡಿದ್ದು, 2 ಮತ್ತು 7ನೇ ಆರೋಪಿಗಳು ಚಾಸಾ-2 ಮತ್ತು 3ರವರಿಗೆ ಕೈಗಳಿಂದ ಹೊಡೆದರು, ಉಳಿದವರು ಸಹ ಅವಾಚ್ಯ ಶಬ್ದಗಳಿಂದ

ಬೈದು ಕೈಗಳಿಂದ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ದಿ. 02-02-2021 ರಂದು ನಿಮ್ಮ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಬಿ. ಇ. ಆರ್, ವಕೀಲರಿಂದಃ-**

ನಾನು ಸೊಂಡೆ ಕೊಪ್ಪ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ಕೃತ್ಯ ನಡೆದ ಸ್ಥಳದಲ್ಲಿ ನಾನು ವಾಸ ಮಾಡುತ್ತಿಲ್ಲ. ದಿ.28-09-2015 ರಂದು ಕೃತ್ಯ ನಡೆದಿರುತ್ತದೆ. ಚಾಸಾ-1 ರಿಂದ 3ರವರು ನಿಮ್ಮ ಸಂಬಂಧಿಕರು ಆಗಿರುವುದರಿಂದ ಅವರ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಕೃತ್ಯ ನಡೆದ ಸಮಯದಲ್ಲಿ ನೀವು ಮತ್ತು ಆರೋಪಿಗಳು ಹಾಜರಿರುವುದಿಲ್ಲ ಎಂದರೆ ಸಾಕ್ಷಿಯು ಕೃತ್ಯ ವು ನಡೆಯುತ್ತಿದ್ದಾಗ ತಾನು ಅಲ್ಲಿಗೆ ಬಂದೆನು ಎನ್ನುತ್ತಾರೆ. ದಿ.02-02-2021 ರಂದು ನಾನು ಪೋಲೀಸರಿಗೆ ಕೃತ್ಯ ನಡೆದ ಸ್ಥಳದಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಚಾಸಾ1ರವರಿಗೆ ಅನುಕೂಲವಾಗಲಿ ಎಂದು ನೀವು ಠಾಣೆಗೆ ಹೋಗಿ ನಿಮ್ಮ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಕೃತ್ಯ ನಡೆದ ಸ್ಥಳದಲ್ಲಿ ಹೇಳಿಕೆಯನ್ನು ನೀಡಿದ್ದೇನೆ ಎನ್ನುತ್ತಾರೆ. ಚಾಸಾ-1 ಮತ್ತು ಆರೋಪಿಗಳು ಸಂಬಂಧಿಕರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸರ್ವೆ ನಂ. 18ರಲ್ಲಿ ಕೃತ್ಯವು ನಡೆದಿರುತ್ತದೆ. ಯಾವ ವಿಷಯಕ್ಕೆ ಕೃತ್ಯವು ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯಾವುದೇ ಕೃತ್ಯವು ನಡೆದಿಲ್ಲ, ನೀವು ಕೃತ್ಯ ನಡೆದ ಸ್ಥಳಕ್ಕೆ ಹೋಗದೇ ಇದ್ದರೂ ಸಹ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1 ರಿಂದ 3ರವರಿಗೆ ಆರೋಪಿಗಳು ಕೈಯಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 3032/2021**
**ಚಾಸಾ - 06/** ಪ್ರಾಸಾ -05

| | |
|---|---|
| ಹೆಸರು | **ನಾಗರಾಜು** |
| ತಂದೆಯ ಹೆಸರು | **ಗಿರಿಯಪ್ಪ** |
| ವಯಸ್ಸು | **54** |
| ಉದ್ಯೋಗ | **ಚಾಲಕ** |
| ವಿಳಾಸ | **ಬೆಂಗಳೂರು** |

**ದಿನಾಂಕ:19-09-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಚಾಸಾ-7ರವರು ನನ್ನ ಹೆಂಡತಿ ಮತ್ತು ಚಾಸಾ- 1 ರವರು ನನ್ನ ತಮ್ಮ. ಚಾಸಾ-2ರವರು ನನ್ನ ತಂದೆ ಮತ್ತು ಚಾಸಾ-3ರವರು ನನ್ನ ತಾಯಿ. ಆರೋಪಿಗಳು ನಮ್ಮ ಗ್ರಾಮದವರು. 2015 ನೇ ಇಸವಿಯಲ್ಲಿ ಬೆಳಗ್ಗೆ 9 ರಿಂದ 9.30ರ ಸಮಯದಲ್ಲಿ ನಮ್ಮ ಮನೆಯ ಹಿಂದೆ ರಸ್ತೆಗಾಗಿ ಜಾಗವನ್ನು ಬಿಟ್ಟಿರುತ್ತೇನೆ ಮತ್ತು ಅಲ್ಲಿ ನಾನು ನನ್ನ ಕಾರನ್ನು ನಿಲ್ಲಿಸಿದ್ದೇನು. ಅಲ್ಲಿ ನಾನು ಗರಿಷ್ಟ 10 ನಿಮಿಷಗಳ ಕಾಲ ಕಾರನ್ನು ನಿಲ್ಲಿಸಿದೆನು. ಆ ಸಮಯದಲ್ಲಿ 2ನೇ ಅರೋಪಿಯು ಬಂದು ಅವರ ಜಾಗದಲ್ಲಿ ಏಕೆ ಕಾರನ್ನು ನಿಲ್ಲಿಸಿದ್ದೀರಾ ಎಂದು ಕೇಳಿದರು. ಆಗ ನಾನು ನಮ್ಮ ಮತ್ತು ಅವರ ಮನೆಯ ಮಧ್ಯೆದಲ್ಲಿ ರಸ್ತೆಗಾಗಿ ಜಾಗವನ್ನು ಬಿಟ್ಟಿದ್ದೇವು. ಆಗಾಗಿ ಕಾರನ್ನು ನಿಲ್ಲಿಸಿದ್ದೇನೆ ಎಂದು ಹೇಳಿದೆನು. 2ನೇ ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದರು.

ಆದಾದ ಮೇಲೆ ನನಗೆ ಕೆಲಸಕ್ಕೆ ಟೈಮ್ ಆದ ಕಾರಣದಿಂದ ಜಗಳವನ್ನು ಆಡಬೇಡಿ ಎಂದು ಹೇಳಿ ಹೊರಟು ಹೋದೆನು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಪಾಟೀ **ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ. 27-09-2015 ರಂದು ಸಂಜೆ 5 ಗಂಟೆ ಸಮಯದಲ್ಲಿ ನೀವು ಮತ್ತು ಚಾಸಾ-7ರವರು ಚಾಸಾ-2 ಮತ್ತು 3ರವರನ್ನು ನೋಡಲು ನಿಮ್ಮ ಊರಿಗೆ ಹೋಗಿದ್ದು, ನೀವು ತಂದಿದ್ದ ಕಾರನ್ನು ಚಾಸಾ-1ರವರ ಮನೆಯ ಹಿಂಭಾಗದಲ್ಲಿ ಇರುವ ಜಾಗದಲ್ಲಿ ನಿಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.28-09-2015 ರಂದು ಬೆಳಗ್ಗೆ 10.30ರ ಸಮಯದಲ್ಲಿ ನೀವು ಮತ್ತು ಚಾಸಾ-7ರವರು ವಾಪಸ್ಸು ಊರಿಗೆ ಹೋಗಲು ಕಾರನ್ನು ತೆಗೆಯುತ್ತಿದ್ದಾಗ, ಚಾಸಾ-1ರವರ ಪಕ್ಕದ ಮನೆಯ ವಾಸಿಯಾದ 1ನೇ ಆರೋಪಿಯು ಏಕಾಏಕಿಯಾಗಿ ಬಂದು ನಿಮಗೆ, ಚಾಸಾ-1 ರಿಂದ 3 ಮತ್ತು 7ರವರಿಗೆ ಏಕೆ ನಮ್ಮ ಹೊಲದಲ್ಲಿ ಕಾರನ್ನು ನಿಲ್ಲಿಸಿದ್ದೀರಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು, ಜಗಳ ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ದಿ.29-09-2015 ರಂದು ಚಾಸಾ-1ರವರು ನಿಮಗೆ ಕರೆ ಮಾಡಿ ತಮಗೂ ಮತ್ತು 1ನೇ ಆರೋಪಿಯವರಿಗೆ ಗಲಾಟೆ ಆಗಿದೆ ಎಂದು ತಿಳಿಸಿದರು, ನಂತರ ನೀವು ಮತ್ತು ಚಾಸಾ- 7ರವರು ಊರಿಗೆ ಹೋಗಿ ವಿಚಾರ ಮಾಡಲಾಗಿ ದಿ.28-09-2015 ರಂದು ಸಂಜೆ 7 ಗಂಟೆ ಸಮಯದಲ್ಲಿ ಚಾಸಾ-1 ಮತ್ತು 2ರವರು ಮನೆಯ ಮುಂದೆ ನಿಂತಿದ್ದಾಗ ಆರೋಪಿಗಳು ಅವರ ಮನೆಯ ಬಳಿ ಹೋಗಿದ್ದರು, 2ನೇ ಆರೋಪಿಯು ನಿಮ್ಮ ಮಕ್ಕಳು ಏಕೆ ಕಾರನ್ನು ತಮ್ಮ ಜಾಗದಲ್ಲಿ ನಿಲ್ಲಿಸಿದ್ದು, ನಿಮ್ಮ ಅಪ್ಪನದಾ ಜಾಗ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡೆದು ಇನ್ನೊಂದು ಸಾರಿ ತಮ್ಮ ತಂಟೆಗೆ ಬಂದರೆ ಸಾಯಿಸಿ ಬಿಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಸದರಿ ವಿಷಯದ ಬಗ್ಗೆ ದಿ.29-09-2015 ರಂದು ಚಾಸಾ-1ರವರು ದೂರನ್ನು ನೀಡಲು ಹೋದಾಗ ಅವರ ಜೊತೆ ನೀವು ಮತ್ತು ಚಾಸಾ-2ರವರು ಸಹ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಚಾಸಾ-1ರವರು ಹೊಲದ

ದಾಖಲೆಗಳನ್ನು ತೆಗೆದುಕೊಂಡು ಬರಲು ಮನೆಯ ಬಳಿ ಹೋದಾಗ ಆರೋಪಿಗಳು ಪುನಃ ಚಾಸಾ-1ರವರನ್ನು ಅಡ್ಡಗಟ್ಟಿದರು, 1ನೇ ಆರೋಪಿಯು ಚಾಸಾ-1ರವರ ಎಡಗೈಗೆ ಕೈಯಿಂದ ಹೊಡೆದರು ಮತ್ತು ಇಬ್ಬರನ್ನು ಠಾಣೆಗೆ ಕರೆಯಿಸಿ ಇಬ್ಬರಿಗೂ ಬುದ್ದಿವಾದ ಹೇಳಿ ತೀರ್ಮಾನ ಮಾಡಲಾಯಿತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಚಾಸಾ-1ರಿಂದ 3 ಮತ್ತು ಲೀಲಾವತಿಯವರು ವಾಪಸ್ಸು ಮನೆಗೆ ಹೋಗುತ್ತಿರುವಾಗ 1ನೇ ಆರೋಪಿಯು ಮತ್ತೆ ಗಲಾಟೆ ಮಾಡಿದ್ದು, 2 ಮತ್ತು 7ನೇ ಆರೋಪಿಗಳು ಚಾಸಾ-2 ಮತ್ತು 3ರವರಿಗೆ ಕೈಗಳಿಂದ ಹೊಡೆದರು, ಉಳಿದವರು ಸಹ ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ದಿ. 02-02-2021 ರಂದು ನಿಮ್ಮ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಬಿ. ಇ. ಆರ್, ವಕೀಲರಿಂದಃ-**

01. ನೀವು ಮತ್ತು ಚಾಸಾ-7ರವರು ಬೆಂಗಳೂರಿನಲ್ಲಿ ವಾಸಿಸುತ್ತಿದ್ದೀರಾ ಎಂರದೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-1ರಿಂದ 3ರವರು ನಿಮ್ಮ ಗ್ರಾಮದಿಂದ ಆಚೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-1 ಮತ್ತು 2ರವರ ಮನೆಗೆ ಸುಮಾರು 1 ಕಿ. ಮೀ. ನಷ್ಟು ಅಂತರವಿದೆ. ಯಾವ ದಿನಾಂಕದಂದು ಗಲಾಟೆಯು ನಡೆದಿತ್ತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಗಲಾಟೆಯು ಬೆಳಗ್ಗೆ 11.30ರ ಸಮಯದಲ್ಲಿ ನಡೆದಿತ್ತು. ಕೃತ್ಯ ನಡೆದ ಸಮಯದಲ್ಲಿ ನಾನು, ಚಾಸಾ-2 , 3 ಮತ್ತು 7ರವರು ಮಾತ್ರ ಇದ್ದೇವು. ಆ ಸಮಯದಲ್ಲಿ ಚಾಸಾ-1ರವರು ಇರಲಿಲ್ಲ.

02. ಆರೋಪಿಗಳು ನಿಮ್ಮ ಸಂಬಂಧಿಕರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಮತ್ತು ಅರೋಪಿಗಳ ನಡುವೆ ಸಿವಿಲ್ ವ್ಯಾಜ್ಯವು ಇತ್ತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಮತ್ತು ಆರೋಪಿಗಳ ನಡುವೆ ಓ. ಎಸ್ ಸಂ. 124/2007 ರಂತೆ ದಾವೆ ಇತ್ತು ಮತ್ತು ಸದರಿ ದಾವೆಯು ಆರೋಪಿಗಳ ಪರವಾಗಿ ಡಿಕ್ರಿ ಆಗಿರುವ ಕಾರಣದಿಂದ ನೀವು ಆರೋಪಿಗಳಿಗೆ ತೊಂದರೆಯನ್ನು ಕೊಡಬೇಕು ಎಂಬ

ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಾನು ಯಾವ ದಿನಾಂಕದಂದು ಊರಿಗೆ ಹೋಗಿದ್ದೇನು ಎಂದು ನನಗೆ ನೆನಪಿಲ್ಲ. ನೀವು ಊರಿಗೆ ಬಂದಿರುವುದಿಲ್ಲ ಮತ್ತು ನೀವು ಹೇಳುವ ಹಾಗೆ ಯಾವುದೇ ಕೃತ್ಯವು ನಡೆದಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳು ಚಾಸಾ-1 ರಿಂದ 3ರವರ ಮೇಲೆ ಹಲ್ಲೆಯನ್ನು ಮಾಡಿರುವುದಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1ರವರು ನಿಮಗೆ ಪೋನ್ ನಲ್ಲಿ ಹೇಳಿರುವ ಎಲ್ಲಾ ವಿಷಯವು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪೋ. ಠಾಣೆಯಲ್ಲಿ ಯಾವುದೇ ರಾಜಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು, ಚಾಸಾ-1ರಿಂದ 3 ಮತ್ತು 7ರವರು ಶಾಮೀಲಾಗಿ ಆರೋಪಿಗಳಿಗೆ ತೊಂದರೆಯನ್ನು ಕೊಡಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 3032/2021**
**ಚಾಸಾ - 05 /** ಪ್ರಾಸಾ -04

| | |
|---|---|
| ಹೆಸರು | **ಗಂಗಾಧರಪ್ಪ** |
| ತಂದೆಯ ಹೆಸರು | **ಪುಟ್ಟಯ್ಯ** |
| ವಯಸ್ಸು | **43** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಸೂಂಡೇಕೊಪ್ಪ** |

**ದಿನಾಂಕಃ19-09-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನನಗೆ ಚಾಸಾ- 1 ರಿಂದ 4ರವರ ಬಗ್ಗೆ ಗೊತ್ತು. ಅವರು ನನ್ನ ದೂರದ ಸಂಬಂಧಿಕರು. 2015 ನೇ ಇಸವಿಯ 29ನೇ ತಾರೀಖಿನಂದು ಆರೋಪಿಗಳು ಚಾಸಾ-2ರವರ ಜೊತೆಯಲ್ಲಿ ಗಲಾಟೆಯನ್ನು ಮಾಡಿದ್ದರು. ಅದಕ್ಕೂ ಮೊದಲು ಚಾಸಾ-6ರವರು ಕಾರನ್ನು ನಿಲ್ಲಿಸಿದ್ದರು ಮತ್ತು ಸದರಿ ವಿಷಯಕ್ಕೆ ಜಗಳ ಆಗಿತ್ತು. ಸದರಿ ವಿಷಯವನ್ನು ಚಾಸಾ-1ರವರು ನನಗೆ ತಿಳಿಸಿದರು. ಈಗ ಸಾಕ್ಷಿಗೆ ನಿಪಿ-3ನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-2ನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ದಿ.02-02-2021 ರಂದು ಸಂಜೆ 4 ರಿಂದ ಸುಮಾರು 5 ರಿಂದ 5.30ರವರೆಗೆ ಪೋಲೀಸರು ನನಗೆ ನೋಟಿಸ್ ನ್ನು ನೀಡಿ ಕರೆಸಿ ಮೇಟಿ ಪಾಳ್ಯ ಗ್ರಾಮದ ಸರ್ವೆ ನಂ.18ರಲ್ಲಿ ಸ್ಥ,ಳ ಪರಿಶೀಲನೆಯನ್ನು ಮಾಡಿದರು. ನನ್ನ ಜೊತೆ ನಿಪಿ-2 ಮತ್ತು 3ಕ್ಕೆ ಚಾಸಾ-1 ಮತ್ತು 4ರವರು ಸಹಿಯನ್ನು ಮಾಡಿದರು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಪಾಟೀ **ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ. 29-09-2015 ರಂದು ನಿಮಗೆ ಪರಿಚಯವಿರುವ ಚಾಸಾ-1ರವರು ಫೋನ್ ಮಾಡಿ ದಿ.28-09-2015 ರಂದು ಬೆಳಗ್ಗೆ 10.30ರ ಸಮಯದಲ್ಲಿ 1ನೇ ಆರೋಪಿಯು ನಮ್ಮ ಕಾರನ್ನು ಅವರ ಜಾಗದಲ್ಲಿ ನಿಲ್ಲಿಸಿದ್ದೇನೆ ಎಂಬ ವಿಚಾರದಲ್ಲಿ ಗುಂಪು ಕಟ್ಟಿಕೊಂಡು ಏಕಾ ಏಕಿಯಾಗಿ ಬಂದು ತನಗೆ, ಚಾಸಾ-1, 2, 6 ಮತ್ತು 7ರವರಿಗೆ ಏಕೆ ನಮ್ಮ ಹೊಲದಲ್ಲಿ ಕಾರನ್ನು ನಿಲ್ಲಿಸಿದ್ದೀರಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು, ಜಗಳ ಮಾಡಿದರು ಎಂದು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.28-09-2015 ರಂದು ಸಂಜೆ 7 ಗಂಟೆ ಸಮಯದಲ್ಲಿ ಚಾಸಾ-2 ಮತ್ತು 3ರವರು ಮನೆಯ ಮುಂದೆ ನಿಂತಿದ್ದಾಗ ಆರೋಪಿಗಳು ಅವರ ಮನೆಯ ಬಳಿ ಹೋಗಿದ್ದರು, 2ನೇ ಆರೋಪಿಯು ನಿಮ್ಮ ಮಕ್ಕಳು ಏಕೆ ಕಾರನ್ನು ತಮ್ಮ ಜಾಗದಲ್ಲಿ ನಿಲ್ಲಿಸಿದ್ದು, ನಿಮ್ಮ ಅಪ್ಪನದಾ ಜಾಗ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡೆದು ಇನ್ನೊಂದು ಸಾರಿ ತಮ್ಮ ತಂಟೆಗೆ ಬಂದರೆ ಸಾಯಿಸಿ ಬಿಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಸದರಿ ವಿಷಯದ ಬಗ್ಗೆ ದಿ.29-09-2015 ರಂದು ಚಾಸಾ-1ರವರು ದೂರನ್ನು ನೀಡಲು ಹೋದಾಗ ಅವರ ಜೊತೆ ನೀವು ಮತ್ತು ಚಾಸಾ-2ರವರು ಸಹ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಚಾಸಾ-1ರವರು ಹೊಲದ ದಾಖಲೆಗಳನ್ನು ತೆಗೆದುಕೊಂಡು ಬರಲು ಮನೆಯ ಬಳಿ ಹೋದಾಗ ಆರೋಪಿಗಳು ಪುನಃ ಚಾಸಾ1ರವರನ್ನು ಅಡ್ಡಗಟ್ಟಿದರು, 1ನೇ ಆರೋಪಿಯು ಚಾಸಾ-1ರವರ ಎಡಗೈಗೆ ಕೈಯಿಂದ ಹೊಡೆದರು ಮತ್ತು ಇಬ್ಬರನ್ನು ಠಾಣೆಗೆ ಕರೆಯಿಸಿ ಇಬ್ಬರಿಗೂ ಬುದ್ದಿವಾದ ಹೇಳಿ ತೀರ್ಮಾನ ಮಾಡಲಾಯಿತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಚಾಸಾ-1ರಿಂದ 3 ಮತ್ತು ನೀಲಾವತಿಯವರು ವಾಪಸ್ಸು ಮನೆಗೆ ಹೋಗುತ್ತಿರುವಾಗ 3ನೇ ಆರೋಪಿಯು ಮತ್ತೆ ಗಲಾಟೆ ಮಾಡಿದ್ದು, 2 ಮತ್ತು 7ನೇ ಆರೋಪಿಗಳು ಚಾಸಾ-2 ಮತ್ತು 3ರವರಿಗೆ ಕೈಗಳಿಂದ ಹೊಡೆದರು, ಉಳಿದವರು ಸಹ ಅವಾಚ್ಯ ಶಬ್ದಗಳಿಂದ

ಬೈದು ಕೈಗಳಿಂದ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ದಿ. 02-02-2021 ರಂದು ನಿಮ್ಮ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಬಿ. ಇ. ಆರ್, ವಕೀಲರಿಂದಃ-**

ನಾನು ಸೊಂಡೆ ಕೊಪ್ಪ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ಕೃತ್ಯ ನಡೆದ ಸ್ಥಳದಲ್ಲಿ ನಾನು ವಾಸ ಮಾಡುತ್ತಿಲ್ಲ. ದಿ.28-09-2015 ರಂದು ಕೃತ್ಯ ನಡೆದಿರುತ್ತದೆ. ಚಾಸಾ-1 ರಿಂದ 3ರವರು ನಿಮ್ಮ ಸಂಬಂಧಿಕರು ಆಗಿರುವುದರಿಂದ ಅವರ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಕೃತ್ಯ ನಡೆದ ಸಮಯದಲ್ಲಿ ನೀವು ಮತ್ತು ಆರೋಪಿಗಳು ಹಾಜರಿರುವುದಿಲ್ಲ ಎಂದರೆ ಸಾಕ್ಷಿಯು ಕೃತ್ಯ ವು ನಡೆಯುತ್ತಿದ್ದಾಗ ತಾನು ಅಲ್ಲಿಗೆ ಬಂದೆನು ಎನ್ನುತ್ತಾರೆ. ದಿ.02-02-2021 ರಂದು ನಾನು ಪೋಲೀಸರಿಗೆ ಕೃತ್ಯ ನಡೆದ ಸ್ಥಳದಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಚಾಸಾ1ರವರಿಗೆ ಅನುಕೂಲವಾಗಲಿ ಎಂದು ನೀವು ಠಾಣೆಗೆ ಹೋಗಿ ನಿಮ್ಮ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಕೃತ್ಯ ನಡೆದ ಸ್ಥಳದಲ್ಲಿ ಹೇಳಿಕೆಯನ್ನು ನೀಡಿದ್ದೇನೆ ಎನ್ನುತ್ತಾರೆ. ಚಾಸಾ-1 ಮತ್ತು ಆರೋಪಿಗಳು ಸಂಬಂಧಿಕರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸರ್ವೆ ನಂ. 18ರಲ್ಲಿ ಕೃತ್ಯವು ನಡೆದಿರುತ್ತದೆ. ಯಾವ ವಿಷಯಕ್ಕೆ ಕೃತ್ಯವು ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯಾವುದೇ ಕ ೃತ್ಯವು ನಡೆದಿಲ್ಲ, ನೀವು ಕೃತ್ಯ ನಡೆದ ಸ್ಥಳಕ್ಕೆ ಹೋಗದೇ ಇದ್ದರೂ ಸಹ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1 ರಿಂದ 3ರವರಿಗೆ ಆರೋಪಿಗಳು ಕೈಯಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**